ಆಲಸ್ಯ ಮಾಡುತ್ತಾ ಬಂದಿದ್ದಾರೆ. ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ತಾಲ್ಲೂಕಿನಲ್ಲಿ ಪ್ರವಾಸಕ್ಕೆ ಬಂದಿದ್ದಾಗ ಗ್ರಾಮದ ರೈತರು ಉತ್ತೂರು ಜಾಲಿಗೇರ ಯಾತ ನೀರಾವರಿ ಯೋಜನೆಯಲ್ಲಿರುವ ದೋಷಗಳನ್ನು ತಿಳಿಸಿದರು. ಆಗ ಸನ್ಮಾನ್ಯ ಮಂತ್ರಿಗಳು ಅವಧಿಗೆ ಅವನ್ನು ಸರಿಪಡಿಸಲು ಆದೇಶವಿತ್ತಾಗಲೂ ಸರಿಯಾಗಿ ಮೋಟಾರ್ ಪಂಪನ್ನು ಮತ್ತು ಕಾಲುವೆಗಳನ್ನು ದುರಸ್ತಿ ಮಾಡಿಲ್ಲ.

ಈಗ ಬೇಸಿಗೆ ಕಾಲ ಪ್ರಾರಂಭವಾಗಿದೆ. ವಿದ್ಯುತ್ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಮೋಟಾರ್ ಪಂಪ್ ಕೆಟ್ಟು ಮೇಲೆ ನೀರು ಪೂರೈಕೆ ನಿಲುಗಡೆಯಾಗುತ್ತದೆ. ಕಾರಣ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಉತ್ತೂರು ಜಾಲಿಗೇರ ಯಾತ ನೀರಾವರಿ ಯೋಜನೆಗೆ ಹೊಸ ನೀರೆತ್ತುವ ಪಂಪ್ ಕೂಡಿಸಿ ಆ ಭಾಗದ ರೈತರ ಜಮೀನುಗಳಿಗೆ ನೀರು ಒದಗಿಸಬೇಕಾಗಿ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

೧೮ ಮಿಲ್ಲು ಬಟ್ಟೆಗಳ ಪೈಪೋಟಿಯಿಂದ ನೇಕಾರರಿಗೆ ಆಗಿರತಕ್ಕ ತೊಂದರೆ

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ನೇಯ್ಗೆ ವೃತ್ತಿಯಿಂದ ಜೀವನ ಸಾಗಿಸುತ್ತಿದ್ದ ನೇಕಾರರು ಮಿಲ್ಲುಬಟ್ಟೆಗಳ ಪೈ ಪೋಟಿಯಿಂದ ಜೀವನ ಸಾಗಿಸುವುದು ದುರ್ಬಲವಾದಾಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಿ ಅಲ್ಲಿ ತಯಾರಾದ ಬಟ್ಟೆಗಳಿಗೆ ರಿಬೇಟ್ ಕೊಡುವ ಮೂಲಕ ಅವರಿಗೆ ಸಹಾಯ ನೀಡುತ್ತಾ ಬಂದರು, ನೇಕಾರರ ಜೀವನವಂಟ್ಟು ಇದರಿಂದ ಬಹಳ ಸುಧಾರಿಸಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮ ನೇಕಾರರ ಸಹಕಾರ ಸಂಘಗಳಲ್ಲಿ ೨೫೦೦ಕ್ಕೂ ಹೆಚ್ಚಿಗೆ ಕೈಮಗ್ಗಳು ಇದ್ದು ವರ್ಷವೊಂದಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗೂ ಹೆಚ್ಚಿನ ಬಟ್ಟೆ ತಯಾರಾಗುತ್ತಿದ್ದು ಸುಮಾರು ಒಂದು ಕಾಲು ಕೋಟಿ ರೂಪಾಯಿ ವಂಜೂರಿಯು ಮೂಲಕ ನೇಕಾರರಿಗೆ ವಿತರಣೆಯಾಗುತ್ತಿದೆ. ಸುಮಾರು ೧೫ ಸಾವಿರಕ್ಕೂ ಮೇಲ್ಪಟ್ಟು ಜನ ಈ ಸಹಕಾರಿ ಸಂಘಗಳನ್ನು ಅವಲಂಬಿಸಿಕೊಂಡಿದ್ದಾರೆ ಈ ಸುಮಾರು ೪೦ ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಪ್ರಮಾಣದ ಬಟ್ಟೆ ದಾಸ್ತಾನಿದೆ. ಪ್ರತಿವರ್ಷವೂ ಹಬ್ಬದ ಸಲುವಾಗಿ ಶೇಕಡ ೨೦ ರಷ್ಟು ರಿಬೇಟ್ ಕೊಡುತ್ತಿದ್ದು ರಿಬೇಟಿನ ಸೌಲಭ್ಯ ಇನ್ನು ವರೆಂದೆ ಇಲ್ಲ ಎಂಬ ಸುದ್ದಿಪತ್ರಿಕೆ ಹಾಗೂ ರೇಡಿಯೋ ಮೂಲಕ ತಿಳಿದು ನೇಕಾರರ ಸಂಘದವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ ಈಗ ೧೮-೩-೬೭ ರಿಂದ ೨೮-೩-೬೭ ರವರೆಗೆ ಪ್ರಿಯದರ್ಶಿನಿ ಹ್ಯಾಂಡ್‌ಲೂಂ ಹೌಸ್ ಆವರಿಗೆ ಶೇಕಡ ೨೦ ರಿಬೇಟ್ ಕೊಟ್ಟಿರುವ ವಿಚಾರ ತಿಳಿದು ಬಂದಿದೆ. ಆಂತೆಯೇ ನೇಕಾರರ ಸಹಕಾರ ಸಂಘದವರಿಗೂ ರಿಬೇಟ್ ಕೊಟ್ಟು ನೇಕಾರರ ಕಷ್ಟವನ್ನು ನಿವಾರಿಸಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಈ ಸೌಲಭ್ಯ ಅವರಿಗೆ ಸಿಗುತ್ತಿಲ್ಲ. ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಇದನ್ನು ಅವರಿಗೂ ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

೧೯ ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳು

ಶ್ರೀ ಎ. ಪುಷ್ಪಾವತಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಅಂಗನವಾಡಿ ಕಾರ್ಯಕರ್ತರು ೮-೩-೬೭ರಂದು ಮುಖ್ಯಮಂತ್ರಿಗಳಿಗೆ ಹಾಗೂ ಸಮಾಜಕಲ್ಯಾಣ ಮಂತ್ರಿಗಳಿಗೂ ಮನವಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಇಲಾಖೆ ಅಧಿಕಾರಿಗಳ ಮೇಲೆ ಗುರುತರವಾದ ಆಪಾದನೆಗಳು ಮತ್ತು ಕೆಲವು ಬೇಡಿಕೆಗಳು ಇವೆ. ಇವರು ಮುಖ್ಯವಾಗಿ ಅಂಗನವಾಡಿ ಕಾರ್ಯಕರ್ತರನ್ನು ಶೋಷಣೆಗೆ ಒಳಪಡಿಸಿದ್ದಾರೆ ಎಂದು ದೂರು ಇದೆ. ಮತ್ತು ಅಪರ ಗೌರವಧನವನ್ನು ಏರಿಸುವ ಬಗ್ಗೆ ಇದೆ.

ಇದರ ಬಗ್ಗೆ ಸಮಾಜಕಲ್ಯಾಣ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಹೇಳಿಕೆ ನೀಡುತ್ತೇನೆ.

ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಉದ್ಯೋಗಿಗಳ ಸಂಘದವರು ದಿನಾಂಕ ೯-೩-೧೯೮೭ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಸಮಾಜ ಕಲ್ಯಾಣ ಮಂತ್ರಿಯವರಿಗೆ ಮನವಿ ಸಲ್ಲಿಸಿ, ಅದರಲ್ಲಿ ಸಮಗ್ರ ಬಾಲವಿಕಾಸ ಯೋಜನೆಯ ಹೊಣೆಗಾರಿಕೆ ಹೊತ್ತ ಕೆಲವು ಅಧಿಕಾರಿಗಳ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ ಹಾಗೂ ಅಂಗನವಾಡಿ ಕಾರ್ಯಕರ್ತೆಯವರನ್ನು ಕುರಿತು ಕೆಲವು ಬೇಡಿಕೆಗಳನ್ನು ಮುಂಡಿಸಿದ್ದಾರೆ. ಮನವಿಯಲ್ಲಿ ಗುರುತರವಾದ ಆಪಾದನೆಗಳನ್ನು ಉನ್ನತ ಅಧಿಕಾರಿಗಳ ಮೇಲೆ ಹೊರಿಸಲಾಗಿದೆ, ಎಲ್ಲಾ ಆಪಾದನೆಗಳನ್ನು ಉನ್ನತ ಮಟ್ಟದ ತನಿಖೆಗೆ, ಅಂದರೆ ಉಪಲೋಕಾಯುಕ್ತರಿಗೆ ವಹಿಸಲಾಗಿದೆ. ಈ ತನಿಖೆಯು ಮುಗಿದು ವರದಿ ಬರುವವರೆಗೂ ಆಪಾದನೆಗೊಳಪಟ್ಟ ಶ್ರೀ ಶಶಿಧರ್, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮತ್ತು ಶ್ರೀ ಚವಾಣ್, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯವರುಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರ ನ್ಯಾಯಬದ್ಧವಾದ ಬೇಡಿಕೆಗಳಿಗೆ ಸರ್ಕಾರ ಆದಷ್ಟು ನ್ಯಾಯವಾದ ರೀತಿಯಲ್ಲಿ ಪರಿಶೀಲಿಸುವುದು. ವಜಾ ಮಾಡಲ್ಪಟ್ಟಿರುವ ಆರು ಜನ ಅಂಗನವಾಡಿ ಕಾರ್ಯಕರ್ತೆಯರನ್ನು. ಎಚ್ಚರಿಕೆ ನೀಡಿ ಪುನಃ ಸೇವೆಗೆ ತೆಗೆದುಕೊಳ್ಳಲಾಗುವುದು. ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯು ಕ್ರಮಬದ್ಧವಾಗಿರುವಂತೆ ಮಾಡಲು ಸೂಕ್ತ ತಿದ್ದುಪಡಿಯನ್ನು ತರಲಾಗುವುದು, ಧಾಲಿಯಾ (ಗೋಧಿ ನುಚ್ಚು)ವನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವಲ್ಲಿ ಆಗುತ್ತಿರುವ ದುರುಪಯೋಗವನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಅದೇ ರೀತಿ "ಕೇರ್" ಮತ್ತು "ನಾನ್‌ಕೇರ್" ಆಹಾರ ಪದಾರ್ಥಗಳ ಬಳಕೆ ರಾಜ್ಯದಲ್ಲೆಲ್ಲ ಏಕ ರೀತಿಯಲ್ಲಿ ಆಗಲು ಏಕರೂಪ ಆಹಾರ ಪದಾರ್ಥಗಳ ಸರಬರಾಜು ಪದ್ಧತಿಯನ್ನು ಜಾರಿಗೆ ತರಲಾಗುವುದು. ಹಾಗೆಯೇ ಅಂಗನವಾಡಿಗಳಿಗೆ ಅಗತ್ಯವಾದ ಆಹಾರ ಧಾನ್ಯ ಇತ್ಯಾದಿಗಳನ್ನು ಜನತಾಬಜಾರ ಮತ್ತು ಟಿ.ಎ.ಪಿ.ಸಿ.ಎಮ್.ಎಸ್.ಗಳ ಮುಖಾಂತರವೇ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗುವುದು.

ಈಗ ಹಾಲಿ ಈ ಕೆಳಕಂಡಂತೆ ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡಲಾಗುತ್ತಿದೆ.

೧. ಎಸ್.ಎಸ್.ಎಲ್.ಸಿ ಪಾಸಾದವರಿಗೆ	ರೂ. ೩೫೦.೦೦
೨. ಎಸ್.ಎಸ್.ಎಲ್.ಸಿ. ಪಾಸಾಗದೇಯಿರುವವರಿಗೆ	ರೂ. ೨೦೦.೦೦
೩. ಆಂಗನವಾಡಿ ಸಹಾಯಕರುಗಳಿಗೆ	ರೂ. ೯೦. ೪

ಸರ್ಕಾರವು ಈ ಕೆಳಕಂಡಂತೆ ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು ಏರಿಸಲು ತೀರ್ಮಾನ ಕೈಗೊಂಡಿದೆ.

೧) ಎಸ್.ಎಸ್.ಎಲ್.ಸಿ. ಪಾಸಾದ ಅಂಗನವಾಡಿಯರಿಗೆ	ರೂ. ೨೭೫.೦೦
೨) ಎಸ್.ಎಸ್.ಎಲ್.ಸಿ. ಪಾಸಾಗಿದ್ದು ೫ ವರ್ಷಗಳ ಸೇವೆ ಸಲ್ಲಿಸಿರುವಂತೆ ಅಂಗನವಾಡಿಯರಿಗೆ	ರೂ. ೩೦೦.೦೦
೩) ಎಸ್.ಎಸ್.ಎಲ್.ಸಿ ಪಾಸಾಗಿದ್ದು ೧೦ ವರ್ಷಗಳ ಸೇವೆ ಸಲ್ಲಿಸಿರುವಂತಹ ಅಂಗನವಾಡಿಯರಿಗೆ	ರೂ. ೩೨೫.೦೦
೪) ಎಸ್.ಎಸ್.ಎಲ್.ಸಿ, ಪಾಸಾಗದೇಯಿರುವವರಿಗೆ	ರೂ. ೨೨೫.೦೦
೫) ಎಸ್.ಎಸ್.ಎಲ್.ಸಿ. ಪಾಸಾಗದೇಯಿದ್ದು ೫ ವರ್ಷಗಳ ಸೇವೆ ಸಲ್ಲಿಸಿರುವ ಅಂಗನವಾಡಿಯರಿಗೆ	ರೂ. ೨೫೦.೦೦
೬) ಎಸ್.ಎಸ್.ಎಲ್.ಸಿ. ಪಾಸಾಗದೇಯಿದ್ದು ೧೦ ವರ್ಷಗಳ ಸೇವೆ ಸಲ್ಲಿಸಿರುವವರಿಗೆ	ರೂ. ೨೭೫.೦೦
೭) ಅಂಗನವಾಡಿ ಸಹಾಯಕರುಗಳಿಗೆ	ರೂ. ೧೦೦.೦೦

ಈ ಮೇಲಿನ ಪರಿಷ್ಕೃತ ಗೌರವಧನವನ್ನು ನೀಡುವ ಬಗೆಗಿನ ಆದೇಶ ಇಂದೇ ಹೊರಡಲಿದೆ ಹಾಗೆಯೇ ಆಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ ಸೌಲಭ್ಯ ಒದಗಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ರಾಜ್ಯ ಯೋಜನೆಗಳಲ್ಲೂ ೧೦೦೦ ಜನಸಂಖ್ಯೆಗೆ ೧ ಆಂಗನವಾಡಿಯಂತೆ ಆಂಗನವಾಡಿ ಕೇಂದ್ರಗಳನ್ನು ಮಂಜೂರುಮಾಡುವ ದಿನಗಳಲ್ಲಿ ಆರಂಭಿಸಲು ಪ್ರಯತ್ನಿಸಲಾಗುವುದು.

ಈ ರೀತಿ ಸರ್ಕಾರ ತೆರೆದ ಮನಸ್ಸಿನಿಂದ ಆಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಉದಾರ ಮನಸ್ಸಿನಿಂದ ಮಾನ್ಯ ಮಾಡಿದೆ. ಇದಕ್ಕೆ ಪ್ರತಿಯಾಗಿ ಸರ್ಕಾರ ಆಂಗನವಾಡಿ ಕಾರ್ಯಕರ್ತೆಯರೂ ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಸಾರ್ವಜನಿಕರ ಮತ್ತು ಸರ್ಕಾರದ ಮನಮೆಚ್ಚುವಂತೆ ಕೆಲಸ ಮಾಡುವರಾಗಿ ಆಶಿಸುತ್ತದೆ.

ಗಮನ ಸೆಳೆಯುವ ಸೂಚನೆ

ತೀರ್ಥಹಳ್ಳಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು

೧೨-೩೦ ಪಿ.ಎಂ.

ಶ್ರೀ ಪಟಮಕ್ಕಿರಪ್ಪ ಕರ್.— ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕಿನ ಬರಗಾಲಕ್ಕೆ ತುತ್ತಾಗಿರುವ ಹಳ್ಳಿಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳದಿರುವ ಬಗ್ಗೆ ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

೧೯೮೬-೮೭ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ೨೦ ಹಳ್ಳಿಗಳನ್ನು ಬರಗಾಲ ಪೀಡಿತವೆಂದು ಗುರುತಿಸಲಾಗಿದೆ. ಈ ಹಳ್ಳಿಗಳ ೬೬,೧೧೫ ಜನರೂ ಬರಗಾಲ ಬವಣೆಗೆ ಗುರಿಯಾಗಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಅಲ್ಲಿನ ಜನತೆಗೆ ಸರ್ಕಾರವು ಸರ್ವವಿಧದ ಸಹಾಯವನ್ನು ನೀಡುತ್ತಿದೆ. ಭತ್ತದ ಬೆಳೆ ನಾಶವಾದ ಕಡೆಯಲ್ಲಿ ಪರ್ಯಾಯ ಬೆಳೆ ತೆಗೆಯಲು ಬೀಜ ಗೊಬ್ಬರಗಳನ್ನು ಒದಗಿಸುವುದಕ್ಕಾಗಿ ಶಿವಮೊಗ್ಗ ಜಿಲ್ಲೆಗೆ ೫-೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅಲ್ಲದೆ, ಬರಪೀಡಿತ ಹಳ್ಳಿಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಶಿವಮೊಗ್ಗ ಜಿಲ್ಲೆಗೆ ಬರ ಪರಿಹಾರ ಶೀರ್ಷಿಕೆಯ ಕೆಳಗೆ ೧೯೮೬ರ ಡಿಸೆಂಬರ್‌ನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮಂಜೂರಾತ್ತ ಕಾಮಗಾರಿಗಳು ಮಂಜೂರಾಗಿದ್ದು, ಅವುಗಳು ಪ್ರಗತಿಯಲ್ಲಿವೆ. ತೀರ್ಥಹಳ್ಳಿ ತಾಲ್ಲೂಕಿನ ೭೬,೭೭೧ ಜಾನುವಾರುಗಳು ತೊಂದರೆಗೊಳಗಾದುದರಿಂದ ಒಂದು ಮೇವು ಬ್ಯಾಂಕನ್ನು ಸ್ಥಾಪಿಸಲಾಗಿತ್ತು. ಈ ತಾಲ್ಲೂಕಿನಲ್ಲಿ ಉದ್ಯೋಗ ಸೃಜನೆಗೆ ೧.೪೧ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೩,೬೮೧ ಮಾನವ ದಿನಗಳನ್ನು ಸೃಜಿಸಲಾಗಿದೆ ರೆಗ್ಯುಲರ್ ಎನ್.ಆರ್.ಇ.ಪಿ.ಗೆ ೫.೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೨೮,೬೯೧ ಮಾನವ ದಿನಗಳನ್ನು ಹಾಗೂ ಆರ್.ಎಲ್.ಇ.ಜಿ.ಪಿ. ಯೋಜನೆಯಡಿಯಲ್ಲಿ ೬.೨೦೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ೪೪.೦೩೬ ಮಾನವ ದಿನಗಳನ್ನು ಸೃಜಿಸಲಾಗಿದೆ. ಇದಲ್ಲದೆ ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ದೊರೆಯುವ ಹಣವನ್ನು ಉಪಯೋಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ.